ನಂ:ಕಂಶಾ/ಎಲ್.ಎನ್.ಡಿ-1/ವಿವ೨೫/2018-19

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301
OFFICE OF THE DEPUTY COMMISSIONER, UTTARA KANNADA DISTRICT, KARWAR, -581 301
ದೂರವಾಣಿ : (08382) 226406/226471/222071, ಫ್ಯಾಕ್ಸ್: 226603/222072 Email: dckarwar@gmail.com

ನಂ:ಕಂಶಾ/ಎಲ್.ಎನ್.ಡಿ1/ವಿವ ೨೫ /2018-19, ದಿನಾಂಕ: 03-08-2018

ಉಪ ಅರಣ್ಯ ಸಂರಕ್ಷಣಾದಿಕಾರಿಗಳು
ಶಿರಸಿ ಉಪ ವಿಭಾಗ, ಶಿರಸಿ

ಮಾನ್ಯರೇ,

ವಿಷಯ: ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕಾನಗೋಡ -ಕಾನಸೂರ ಗ್ರಾಮ ಸ.ನಂ.54ಅ ರ ಅರಣ್ಯ ಜಮೀನು ಕ್ಷೇತ್ರ 1.33 ಹೆಕ್ಟೇರ್ ಜಮೀನನ್ನು ಕಾರ್ಯನಿರ್ವಾಹಕ ಇಂಜೀನಿಯರ (ವಿ) ಬೃಹತ ಕಾಮಗಾರಿ ವಿಭಾಗ (ಉಕ) ಕ.ವಿ.ಪ್ರ.ಸ.ನಿ.ನಿ ಹುಬ್ಬಳ್ಳಿ ಹಸ್ತಾಂತರಿಸುವ ಕುರಿತು.

ಉಲ್ಲೇಖ: 1) ಕಾರ್ಯನಿರ್ವಾಹಕ ಇಂಜೀನಿಯರ (ವಿ) ಬೃಹತ ಕಾಮಗಾರಿ ಉತ್ತರ ಕನ್ನಡ ಜಿಲ್ಲೆ, ಹುಬ್ಬಳ್ಳಿ ರವರ ಪತ್ರ ಸಂ:605/ಕಾನಿಇ(ವಿ)/ಬೃಕಾವಿ/ಉಕ/ಸಕಾನಿಇ(ಕ)/18-19, 2050-54, ದಿನಾಂಕ: 27-7-2018

2) ತಹಶೀಲ್ದಾರ ಸಿದ್ದಾಪುರ ರವರ ಪತ್ರ ನಂ:ಭೂಮಿ/ವಿವ-256/2017-18, ದಿನಾಂಕ 3-7-2018

3) ಸಹಾಯಕ ಕಮೀಷನರ ಶಿರಸಿ ರವರ ಪತ್ರ ನಂ: ಎಲ್.ಎನ್.ಡಿ/ಭೂ ಮಂ ವಿವ/ 04/2018-19, ದಿನಾಂಕ 31-7-2018

28 AUG 2018

**************

ಸಿದ್ದಾಪುರ ತಾಲೂಕಿನ ಕಾನಗೋಡ -ಕಾನಸೂರ ಗ್ರಾಮದಲ್ಲಿ ಅರಣ್ಯ ಇಲಾಖೆಗೆ ಸೇರಿದ ಸ.ನಂ 54ಅ ರಲ್ಲಿ 110 ಕೆ.ವಿ ವಿದ್ಯುತ ಉಪಕೇಂದ್ರ ನಿರ್ಮಿಸಲು 1 ಹೇಕ್ಟೆರ್ ಜಾಗವನ್ನು ಮತ್ತು 110 ಕೆ.ವಿ ಮಾರ್ಗವನ್ನು ನಿರ್ಮಿಸಲು 0.33 ಹೇಕ್ಟೆರ್ ಜಾಗವನ್ನು ಗುರುತಿಸಲಾಗಿದ್ದು ಅರಣ್ಯ ಇಲಾಖೆಯಿಂದ ಜಾಗವನ್ನು ಲೀಜಗೆ ಪಡೆಯಲು ಅರಣ್ಯ ಇಲಾಖೆಯವರಿಗೆ ಪರಿಹಾರವಾಗಿ ಅರಣ್ಯೀಕರಣಗೊಳಿಸಲು ಸಮನಾದ ಕಂದಾಯ ಭೂಮಿಯನ್ನು ಗೇಣಿಗೆ ಪಡೆಯಲು ಕಾರ್ಯನಿರ್ವಾಹಕ ಇಂಜೀನಿಯರ (ವಿ) ಬೃಹತ ಕಾಮಗಾರಿ ವಿಭಾಗ (ಉಕ) ಕ.ವಿ.ಪ್ರ.ಸ.ನಿ.ನಿ ಹುಬ್ಬಳ್ಳಿ ಇವರು ಉಲ್ಲೇಖ (1) ರಂತೆ ಕೋರಿರುತ್ತಾರೆ. ಕಾನಗೋಡ -ಕಾನಸೂರ ಗ್ರಾಮದ ಅರಣ್ಯ ಸ.ನಂ 54ಅ ರ ಜಮೀನು ಪರಿಹಾರವಾಗಿ ಸಮನಾದ ಸಿದ್ದಾಪುರ ತಾಲೂಕಿನ ಉಂಬಳಮನೆ ಹೋಬಳಿಯ ಕೆರೆಗದ್ದೆ ಗ್ರಾಮದ ಸ.ನಂ.96 ರ ಸರಕಾರಿ ಪಡ ಜಮೀನು ಕ್ಷೇತ್ರ 4-5-0 ಪೈಕಿ 3-12-0 ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ತಹಶೀಲ್ದಾರ ಸಿದ್ದಾಪುರ ರವರು ಗುರುತಿಸಿ ಸ್ಥಳ ತನಿಖಾ ವರದಿ ಮತ್ತು ಪಿ.ಟಿ. ಶೀಟ್ ವರದಿ ಕಾನಸೂರ ಗ್ರಾಮದ 110 ಕೆ.ವಿ ವಿದ್ಯುತ ಉಪಕೇಂದ್ರ ಮತ್ತು 110 ಕೆ.ವಿ ಮಾರ್ಗವನ್ನು ನಿರ್ಮಿಸಲು ಒಟ್ಟು 1.33 ಹೇಕ್ಟೆರ್ ಅರಣ್ಯ ಜಮೀನಿನ ಪರವಾಗಿ ಸಿದ್ದಾಪುರ ತಾಲೂಕಿನ ಉಂಬಳಮನೆ ಹೋಬಳಿಯ ಕೆರೆಗದ್ದೆ ಗ್ರಾಮದ ಸ.ನಂ.96 ರ ಸರಕಾರಿ ಪಡ ಜಮೀನು ಕ್ಷೇತ್ರ 4-5-0 ಪೈಕಿ 3-12-0 ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಬಹುದಾಗಿ ತಹಶೀಲ್ದಾರರು ತಮ್ಮ ವರದಿಯಲ್ಲಿ ಅಭಿಪ್ರಾಯ ನೀಡಿರುತ್ತಾರೆ.

ಪ್ರಯುಕ್ತ ಸಿದ್ದಾಪುರ ತಾಲೂಕಿನ ಕಾನಸೂರ ಗ್ರಾಮದಲ್ಲಿ 110 ಕೆ.ವಿ ವಿದ್ಯುತ ಉಪಕೇಂದ್ರ ಸ್ಥಾಪಿಸಲು ಕಾನಗೋಡ -ಕಾನಸೂರ ಗ್ರಾಮದ ಅರಣ್ಯ ಸ.ನಂ 54ಅ ರ ಜಮೀನನ್ನು ಕಾರ್ಯನಿರ್ವಾಹಕ ಇಂಜೀನಿಯರ (ವಿ) ಬೃಹತ

Scanned by CamScanner

ನಂ:ಕಂಶಾ/ಎಲ್.ಎನ್.ಡಿ-1/ವಿವ 25/2018-19

ಕಾಮಗಾರಿ ಉತ್ತರ ಕನ್ನಡ ಜಿಲ್ಲೆ, ಹುಬ್ಬಳ್ಳಿ ಇವರಿಗೆ ಹಸ್ತಾಂತರಿಸಿದ್ದಲ್ಲಿ ಪರಿಹಾರಾತ್ಮಕವಾಗಿ ಸಮನಾದ ಸಿದ್ದಾಪುರ ತಾಲೂಕಿನ ಉಂಬಳಮನೆ ಹೋಬಳಿಯ ಕಿರೆಗದ್ದೆ ಗ್ರಾಮದ ಸ.ನಂ.96 ರ ಸರಕಾರಿ ಪಡ ಜಮೀನು ಕ್ಷೇತ್ರ 4-5-0 ಪೈಕಿ 3-12-0 ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗುವುದು.

ತಮ್ಮ ವಿಶ್ವಾಸಿ,

3/8

ಜಿಲ್ಲಾಧಿಕಾರಿ,

ಉತ್ತರ ಕನ್ನಡ ಕಾರವಾರ

ಪ್ರತಿಯನ್ನು

1) ಅರಣ್ಯ ಸಂರಕ್ಷಣಾಧಿಕಾರಿಗಳು ಕೆನರಾ ವೃತ್ತ ಉತ್ತರ ಕನ್ನಡ ಕಾರವಾರ ರವರಿಗೆ ಮಾಹಿತಿಗಾಗಿ ಆದರಪೂರ್ವಕ ಸಲ್ಲಿಸಿದೆ.

2) ಕಾರ್ಯನಿರ್ವಾಹಕ ಇಂಜೀನಿಯರ (ವಿ) ಬೃಹತ ಕಾಮಗಾರಿ ಉತ್ತರ ಕನ್ನಡ ಜಿಲ್ಲೆ, ಹುಬ್ಬಳ್ಳಿ ಮಾಹಿತಿಗಾಗಿ

3 ತಹಶೀಲ್ದಾರ ಸಿದ್ದಾಪುರ ರವರಿಗೆ ಸೂಕ್ತ ಕ್ರಮದ ಬಗ್ಗೆ ಕಳುಹಿಸಿದೆ.

4) ಸಹಾಯಕ ಕಮೀಷನರ ಶಿರಸಿ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.

5) ತಹಶೀಲ್ದಾರ ಸಿದ್ದಾಪುರ ಮೋಜಣಿ ವಿಭಾಗ ರವರಿಗೆ ಸೂಕ್ತ ಕ್ರಮದ ಕುರಿತು ಕಳುಹಿಸಿದೆ.

Scanned by CamScanner